ಶ್ರೀ ಕೆ. ವಿ. ಬೈರೇಗೌಡ.—1 ಲಕ್ಷ 42 ಸಾವಿರದ 902 ರೂಪಾಯಿ ವರಮಾನ ಬಂದಿದೆ ಎಂದು ತೋರಿಸಿದ್ದೀರಿ. ಈ ವರಮಾನ, ಖರ್ಚು ಕಳೆದು ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಖರ್ಚು ಕಳೆದು ಬಂದಿರುವುದಲ್ಲ, ಅದು ಗ್ರಾಸ್ ಇಕಂ.

ಶ್ರೀ ಕೆ. ವಿ. ಬೈರೇಗೌಡ.—ಹಾಗಾದರೆ ಆ ಬಾಬ್ತಿಗೆ ಖರ್ಚು ಎಷ್ಟೆಷ್ಟು, ಸ್ವಾಮಿ?

ಶ್ರೀ ಎಚ್. ಸಿದ್ದವೀರಪ್ಪ.—1951-52 ನೇ ಇಸವಿಯಲ್ಲಿ ಕ್ಯಾಪಿಟಲ್ 92,617 ರೂಪಾಯಿ, ರೆಕರಿಂಗ್ 2,91,554 ರೂಪಾಯಿ, 1952-53 ನೇ ಜನವರಿ ಅಖೈರಿನವರೆಗೆ ಕ್ಯಾಪಿಟಲ್ 97,805 ರೂಪಾಯಿ, ರೆಕರಿಂಗ್ 1,91,527 ರೂಪಾಯಿ.

ಶ್ರೀ ಕೆ. ವಿ. ಬೈರೇಗೌಡ.—ನನಗೆ ಬೇಕಾಗಿರುವ ಉತ್ತರ, ಈ ಐಟಂವಾರ್ ಹಾಕಿದ್ದೀರಲ್ಲಾ, ಇಂಥಿಂಥದ್ದು ಎಂದು, ಅಥವಾ ಒಂದೊಂದು ಶಾಖೆಯಲ್ಲಿ ಎಷ್ಟು ಆದಾಯ ಬಂದಿದೆ ಎಂಬುದು.

ಶ್ರೀ ಎಚ್. ಸಿದ್ದವೀರಪ್ಪ.—ಒಟ್ಟು ಲೆಕ್ಕ ಹಾಕಿದರೆ ಇವೊತ್ತಿನವರೆಗೂ ಆದಾಯಕ್ಕಿಂತ ಖರ್ಚೇ ಹೆಚ್ಚಾಗಿದೆ. ಒಂದು ವಿಷಯಕ್ಕೆ ಮಾನ್ಯ ಸದಸ್ಯರ ಗಮನವನ್ನು ಸೆಳೆಯ ಬೇಕಾಗಿದೆ. ಈ ಸ್ಕೀಂ ಪುರು ಆಗಿ ಒಂದು ವರ್ಷವಾಯಿತು. ಒಂದು ವರ್ಷದಲ್ಲಿ ಇಷ್ಟು ಉತ್ಪತ್ತಿ ಬಂದಿರುವುದು ಸರ್ಕಾರದವರ ಅಭಿಪ್ರಾಯದಲ್ಲಿ ತೃಪ್ತಿಕರವಾಗಿದೆ ಎಂದು ಕಂಡುಬರುತ್ತದೆ.

ಶ್ರೀ ಕೆ. ವಿ. ಬೈರೇಗೌಡ.—ಮೀನು ಸಾಕುವ ಕ್ಷೇತ್ರ ಎಂದು ಇದೆ. ಇದರಲ್ಲಿ ಖರ್ಚು ಹೆಚ್ಚು ಆದಾಯ ಕಡಮೆಯಾಗುತ್ತಾ ಇದೆ. ಆದ್ದರಿಂದ ಅದಕ್ಕೆ ಮಾಡುವ ಖರ್ಚನ್ನೇ ಬೇರೆ ಬಾಬುಗಳಿಗೆ ಎಂದರೆ ಕೋಳಿ ಸಾಕುವುದು, ಕುರಿ ಸಾಕುವುದು ಇವುಗಳಿಗೆ ಖರ್ಚು ಮಾಡಿ ಇದನ್ನು ಅಭಿವೃದ್ಧಿಪಡಿಸುವುದು ಒಳ್ಳೆಯದಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಎಕ್ಸಾಮಿನ್ ಮಾಡುತ್ತಾ ಇದ್ದೇವೆ. ಆಗಲೇ ಹೇಳಿದಹಾಗೆ ಒಂದು ವರ್ಷ ಕಡಮೆ ಆಗಬಹುದು. ಎಕ್ಸಾಮಿನ್ ಮಾಡಿ ನೋಡುತ್ತೇವೆ.

Alleged corruption in the Nanjangud Sub-Division.

Q.—98. **Sri B. RACHIAH** (Yelandur—Scheduled Castes).—

Will the Government be pleased to state:—

(*a*) the names of offices and societies visited by the Anti-Corruption Department in Nanjangud Sub-Division since the commencement of the Financial year 1952-53;

(*b*) the number of misappropriation and corruption cases detected?

A.—**Sri Kadidal MANJAPPA** (Minister for Revenue and Public Works).—

(*a*) Offices.—

(1) Sub-Division Office at Nanjangud.

(2) and (3) Taluk Offices at T.-Narsipur and Gundlupet. No visit was paid to any society.

(*b*) No case of misappropriation or corruption was detected in the course of inspections of the above offices.

ಶ್ರೀ ಬಿ. ರಾಚಯ್ಯ.—ಚಾಮರಾಜನಗರ ತಾಲ್ಲೂಕು, ಯಳಂದೂರು ತಾಲ್ಲೂಕುಗಳಲ್ಲಿ ಲಂಚ ರುಷುವತ್ತು ಇಲ್ಲ ಎಂದು ಅಭಿಪ್ರಾಯವೆ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಹೇಳಿಲ್ಲವಲ್ಲ!

ಶ್ರೀ ಬಿ. ರಾಚಯ್ಯ.—ಅಲ್ಲಿನ ಲ್ಯಾಂಡ್ ಮಾರ್ಟ್ಗೇಜ್ ಬ್ಯಾಂಕ್‌ಗಳಲ್ಲಿ ಹಲವಾರು ಸಾವಿರ ರೂಪಾಯಿಗಳು ಪೋಲಾಗಿವೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಬಿ. ರಾಚಯ್ಯ.—ಡಿಪಾರ್ಟ್‌ಮೆಂಟಿನವರು ತನಿಖೆ ನಡೆಸುವಾಗ ಅವರಿಗೆ ಗೊತ್ತಾಗಲಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಆ ಪೋರ್ಟ್ ಪೋಲಿಯೋ ನನ್ನಲ್ಲಿಲ್ಲ. ನನ್ನ ಪಕ್ಕದಲ್ಲಿರುವ ಮಂತ್ರಿಗಳಿಗೆ ಗೊತ್ತಿರಬೇಕೆಂದು ಕಾಣುತ್ತದೆ.

ಶ್ರೀ ಬಿ. ರಾಚಯ್ಯ.—ಲ್ಯಾಂಡ್ ಮಾರ್ಟ್ಗೇಜ್ ಬ್ಯಾಂಕಿನಲ್ಲಿ ಹಲವಾರು ಸಾವಿರ ರೂಪಾಯಿಗಳ ಮಿಸ್ ಅಪ್ರೋಪ್ರಿಯೇಷನ್ ಆಗಿರುವುದು ಗೊತ್ತಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ತನಿಖೆಯಲ್ಲಿದೆ.

ಶ್ರೀ ಬಿ. ರಾಚಯ್ಯ.—ಮತ್ತೆ ಕೆಲವು ಸೊಸೈಟಿಗಳಲ್ಲಿ ದುರ್ಬಿನಿಯೋಗವಾಗಿರುವುದು ಅವು ತಾಲ್ಲೂಕು ಆಮಲ್ದಾರರ ಗಮನಕ್ಕೆ ಬಂದಿಲ್ಲವೇ?

Mr. SPEAKER.—'It is under enquiry' was the answer given by the Hon'ble Minister.

Proposed Legislature Buildings.

Q.—138. **Sri N. C. NAGAIAH REDDY** (Goribidnur).—

Will the Government be pleased to state:—

(*a*) the estimated cost of the Legislature Buildings proposed to be built;

(*b*) whether tenders have been called for; if so, who are all the tenderers;

(*c*) whether the construction is entrusted to the contractors on piece-work system;

(*d*) who are all those contractors;

(*e*) the rates at which the works are entrusted to them;

(*f*) whether it is current Schedule rate or Estimated rate?